


# ಪೀಕೋ ಅಥವಾ ರೋಲ್ಡ್ ಹೆಮ್ ಹೊಲಿಯುವುದು ಹೇಗೆ

ಈ ವಿಡಿಯೋದಲ್ಲಿ ನೀವು ಬಟ್ಟೆಯ ಅಂಚುಗಳನ್ನು ರೋಲ್ಡ್ ಹೆಮ್ ಅಥವಾ 'ಪೀಕೋ' – ಹೇಗೆ ಪೂರ್ಣಗೊಳಿಸುವುದು ಎಂಬುದನ್ನು ಕಲಿಯುತ್ತೀರಿ.










ಇದನ್ನು ಮಾಡಲು ನಿಮಗೆ ಬೇಕಾಗಿರುವುದು – ಒಂದು ಜಾರ್ಜೆಟ್ ಅಥವಾ ರೇಷ್ಮೆಯ ನಯವಾದ ಉದ್ದನೆಯ ಬಟ್ಟೆ ಅಥವಾ ದುಪ್ಪಟ್ಟಾ, ನಿಮ್ಮ ಹೊಲಿಗೆ ಯಂತ್ರದ ಉಪಕರಣಗಳ ಕಿಟ್‌ನಲ್ಲಿ ಇರುವ ಪೀಕೋ ಅಥವಾ ರೋಲ್ಡ್ ಹೆಮ್ಮಿಂಗ್ ಫುಟ್.

ಈಗ ಪೀಕೋ ಫುಟ್ ಜೋಡಿಸುವುದು ಹೇಗೆ ಎಂದು ನೋಡೋಣ.

ಬ್ಯಾಲೆನ್ಸ್ ವ್ಹೀಲನ್ನು ನಿಮ್ಮ ಕಡೆಗೆ ತಿರುಗಿಸಿಕೊಂಡು ಸೂಜಿಯನ್ನು ಮೇಲ್ತುದಿಗೆ ಜರುಗಿಸಿ. ಫುಟ್ ಕ್ಲಾಂಪ್ ಲಿವರನ್ನು ಮೇಲಕ್ಕೆ ಮಾಡಿ ಫುಟ್ 'ಎ'ಯನ್ನು ರಿಲೀಸ್ ಮಾಡಿ. ಈಗ ಫುಟ್ ಕ್ಲಾಂಪ್ ಲಿವರನ್ನು ಕೆಳಕ್ಕೆ ಮಾಡಿ ಪೀಕೋ ಫುಟ್‌ನ್ನು ಸರಿಯಾಗಿ ಜೋಡಿಸಿ.

ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು ಡಯಲ್ 'ಸಿ'ಗೆ ಸೆಟ್ ಮಾಡಿ. ಸ್ಟಿಚ್ ಲೆಂಗ್ತ್ ಸೆಲೆಕ್ಟರನ್ನು 2ಕ್ಕೆ ಸೆಟ್ ಮಾಡಿ. ಈ ಸೆಟ್ಟಿಂಗ್‌ಗಳಿಂದ ನೀವು ಮಾಡುವ ರೋಲ್ಡ್ ಹೆಮ್‌ನ ಗುಣಮಟ್ಟ ಉತ್ತಮವಾಗುತ್ತದೆ.

ಈಗ ಒಂದು ಬಟ್ಟೆ ತುಂಡನ್ನು ತೆಗೆದುಕೊಂಡು ಅದರ ಹಿಂಭಾಗವನ್ನು ಮೇಲ್ಮುಖ ಮಾಡಿ. ಅದರ ಮೂಲೆಯನ್ನು ಪ್ರೆಷರ್ ಫುಟ್ ಕೆಳಗೆ ಇಟ್ಟು ಸರಿಯಾಗಿ ಹೊಂದಿಸಿ. ಹೊಲಿಗೆಯನ್ನು ಸ್ಟಾರ್ಟ್ ಮಾಡಿ ಕೆಲವು ಮುಮ್ಮುಖ ಹೊಲಿಗೆಗಳನ್ನು ಹಾಕಿ.

ಈಗ ಪ್ರೆಷರ್ ಫುಟ್ ಮೇಲಕ್ಕೆ ಮಾಡಿ ಬಾಬಿನ್ ಮತ್ತು ಸೂಜಿ ದಾರಗಳನ್ನು ತೆಗೆಯಿರಿ. ಹೆಮ್ಮಿಂಗ್ ಮಾಡುವಾಗ ಕೈಯಲ್ಲಿ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಉದ್ದನೆಯ ಬಾಲದ ಹಾಗೆ ಒಂದಿಷ್ಟು ದಾರವನ್ನು ಉಳಿಸಿಕೊಂಡು ಬಾಕಿ ದಾರ ಕತ್ತರಿಸಿ.

ದಾರವನ್ನು ಪೀಕೊ ಫುಟ್ ಒಳಗೆ ಇಡಿ. ಫುಟ್‌ನ ರೋಲ್ ಆಗಿರುವ ಭಾಗದ ಮೂಲಕ ಬಟ್ಟೆಯನ್ನು ಎಳೆಯಿರಿ. ಲಿವರ್ ಒತ್ತಿ ಫುಟ್‌ನ್ನು ಬಟ್ಟೆಯ ಮೇಲೆ ಇಳಿಸಿ.





ಉಳಿದಿರುವ ದಾರವನ್ನು ನಿಧಾನವಾಗಿ ಪ್ರೆಷರ್ ಫುಟ್ ಕೆಳಗೆ ತನ್ನಿ. ಸುರುಳಿ ಸುತ್ತಿ ದಾರದ ತುದಿಯಿಂದ ಎಳೆಯಿರಿ. ನಿಧಾನವಾಗಿ ಹೊಲಿಗೆಯಂತ್ರವನ್ನು ಆನ್ ಮಾಡಿ. ಬಟ್ಟೆಯು ಪೀಕೋ ಫುಟ್‌ನ ಒಳಗೆ ಸೇರಿಕೊಂಡು ಸುರುಳಿಯಾಗುತ್ತದೆ.

ರೋಲ್ಡ್ ಹೆಮ್ ಹೊಲಿಯಲು ಯಂತ್ರದ ವೇಗವನ್ನು ನಿಧಾನವಾಗಿ ಹೆಚ್ಚಿಸಿ. ಸುರುಳಿಯು ಒಂದೇ ಗಾತ್ರದಲ್ಲಿರುವಂತೆ ನೋಡಿಕೊಳ್ಳಲು ಬಟ್ಟೆಯನ್ನು ನಿಧಾನವಾಗಿ ಬೆರಳುಗಳ ನಡುವೆ ಜಾರಿಸುತ್ತಿರಿ.

ಒಂದು ಬದಿಯ ಹೊಲಿಗೆಯನ್ನು ಮುಗಿಸುತ್ತಿದ್ದಂತೆಯೇ ಫುಟ್ ಮೇಲಕ್ಕೆತ್ತಿ, ಸ್ವಲ್ಪ ಬಿಟ್ಟುಕೊಂಡು ಉಳಿದ ದಾರವನ್ನು ಕತ್ತರಿಸಿ. ಏಕೆಂದರೆ ಪೀಕೊ ಫುಟ್ ಮೂಲಕ ಬಟ್ಟೆಯ ಮತ್ತೊಂದು ಭಾಗವನ್ನು ಎಳೆಯಲು ಸ್ವಲ್ಪ ಬಿಟ್ಟುಕೊಂಡ ದಾರ ಬೇಕಾಗುತ್ತದೆ.

ಇದೇ ಹಂತಗಳನ್ನು ಬಟ್ಟೆಯ ಮತ್ತೊಂದು ಭಾಗವನ್ನು ಹೊಲಿಯುವಾಗಲೂ ಮಾಡಿ, ಉಳಿಯುವ ಹೆಚ್ಚುವರಿ ದಾರವನ್ನು ಕತ್ತರಿಸಿ.

ಈ ವಿಧಾನವನ್ನು ಬೇರೆ ಬೇರೆ ತರಹದ ಸಾಮಗ್ರಿಗಳನ್ನು ಉಪಯೋಗಿಸಿ ಆಭ್ಯಾಸ ಮಾಡಿ. ನಿಮಗಿದು ಭವಿಷ್ಯದಲ್ಲಿ ಕ್ರಿಯಾತ್ಮಕ ಕೆಲಸಗಳನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸಲು ಅವಕಾಶ ನೀಡುತ್ತದೆ.